ಕನ್ನಡ ಪೋಸ್ಟ್
ಇದು ಸುದ್ದಿ ವಿಳಾಸ
KANNADA POST
ಸಂಪಾದಕ : ಮಂಜು ಬನವಾಸೆ
ಕನ್ನಡ ದಿನ ಪತ್ರಿಕೆ Kannada Daily
ಹಾಸನ E-mail : kannadapostnews@gmail.com / ಕನ್ನಡ post Price: ₹1
Vol.No.01 | Issue. 206 | Pages. 2 | Date: 25-06-2025, WEDNESDAY RNI NO: KARKAN/2024/89601
ಸಂಪುಟ : 01 - ಸಂಚಿಕೆ : 206 - ಪುಟಗಳು : 2 - 25 ಜೂನ್ 2025 ಬುಧವಾರ Ph: 8762954248 ದರ : ₹1

# ವರುಣಾರ್ಭಟಕ್ಕೆ ಮಲೆನಾಡು ತತ್ತರ

## ಕೊಚ್ಚಿ ಹೋದ ತಡೆಗೋಡೆ, ಧರೆಗುರುಳಿದ ಮರ | ವಿದ್ಯುತ್ ಕಂಬ ಬಿದ್ದು ಕಾರ್ಮಿಕ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆ ಆರ್ಭಟ ಜೋರಾಗಿದ್ದು ನಿರಂತರ ವರ್ಷಧಾರೆಗೆ ಜನಜೀವನ ತತ್ತರಿಸಿದೆ.

ಸಕಲೇಶಪುರ ತಾಲ್ಲೂಕಿನ ಆನೆಮಹಲ್-ದೋಣಿಗಾಲ್ ಬಳಿ ರಾಷ್ಟ್ರೀಯ ಹೆದ್ದಾರಿ ತಡೆಗೋಡೆ ಕೊಚ್ಚಿ ಹೋಗಿದೆ. ಹೊಳೆನರಸೀಪುರದಲ್ಲಿ ವಿದ್ಯುತ್ ಕಂಬ ಬದಲಿಸುವಾಗ ಹಳೆಯ ಕಂಬ ಬಿದ್ದು ಕಾರ್ಮಿಕ ಮೃತಪಟ್ಟಿದ್ದಾನೆ. ಮತ್ತೆ ಹಲವೆಡೆ ಅವಘಡಗಳು ಸಂಭವಿಸಿವೆ. ಸಂಜೆ ಬಳಿಕ ಹಾಸನ ಸೇರಿ ವಿವಿಧೆಡೆ ಮಳೆ ಆರ್ಭಟ ಜೋರಾಗಿತ್ತು.

100 ಮೀಟರ್ ಉದ್ದದ ಗೆಬಿಯನ್ ವಾಲ್ ಕೊಚ್ಚಿ ಹೋಗಿದೆ. ರಸ್ತೆ ಸುರಕ್ಷತೆಗಾಗಿ ಇದನ್ನು ನಿರ್ಮಿಸಲಾಗಿತ್ತು. ಕಳೆದ ವಾರವಷ್ಟೇ ಬಿರುಕುಬಿಟ್ಟಿದ್ದ ಗೋಡೆ ಇದೀಗ ಇಲ್ಲವಾಗಿದೆ. ಮತ್ತೆ ಮಳೆ ಹೆಚ್ಚಾದರೆ ಒಂದು ಬದಿಯ ರಸ್ತೆಯೇ ಕೊಚ್ಚಿ ಹೋಗುವ ಆತಂಕ ಎದುರಾಗಿದೆ.

ಭೂ ಕುಸಿತ: ಮತ್ತೊಂದೆಡೆ ಶಿರಾಡಿ ಘಾಟ್‌ನ ಹಲವು ಕಡೆ ಭೂಕುಸಿತದ ಭೀತಿ ಕಾಡುತ್ತಿದೆ. ಆನೆಮಹಲ್ ಬಳಿಯಿಂದ ಮಾರನಹಳ್ಳಿವರೆಗೂ ಗುಡ್ಡ ಕುಸಿತ ಭಯ ಮನೆಮಾಡಿದೆ. ಇದನ್ನು ತಡೆಯಲು ಅಧಿಕಾರಿಗಳ ಕಸರತ್ತು ನಡೆಸುತ್ತಿದ್ದಾರೆ.



ಇದಕ್ಕಾಗಿ ಕಡಿದಾದ ಗುಡ್ಡ ಪ್ರದೇಶಗಳಿಗೆ ಪ್ಲಾಸ್ಟಿಕ್ ಹೊದಿಕೆ ಹೊದಿಸುತ್ತಿದ್ದಾರೆ. ಗುಡ್ಡ ಕುಸಿತ ಆದರೆ ವಾಹನ ಸಂಚಾರಕ್ಕೆ ಸಂಕಷ್ಟ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮ ಕೈಗೊಂಡಿದ್ದಾರೆ.

ರಸ್ತೆಗೆ ಅಡ್ಡಲಾಗಿ ಬಿದ್ದ ಮರ: ಮಲೆನಾಡು ಭಾಗದಲ್ಲಿ ಬಿರುಗಾಳಿ ಸಹಿತ ಧಾರಾಕಾರ ಮಳೆಯಾಗುತ್ತಿದ್ದು ಬೃಹತ್ ಗಾತ್ರದ ಮರವೊಂದು ರಸ್ತೆ ಅಡ್ಡಲಾಗಿ ಹಾಗೂ ಮನೆಯ ಮೇಲೆ ಬಿದ್ದಿರುವ ಘಟನೆ ಆಲೂರು ತಾಲ್ಲೂಕಿನ ಶಿರಗಾವರ ಗ್ರಾಮದಲ್ಲಿ ನಡೆದಿದೆ. ಮಗ್ಗೆ-ಹರಿಹಳ್ಳಿ ಮುಖ್ಯ ರಸ್ತೆಯ ಮೇಲೆ ಮರ ಬಿದ್ದಿದ್ದು, ಮರ ಧರೆಗುರುಳಿದ್ದರಿಂದ ರಸ್ತೆ ಸಂಚಾರ ಬಂದ್ ಆಗಿತ್ತು. ರಸ್ತೆ ಬದಿಯಿರುವ ಲಕ್ಷ್ಮಣ್ ಎಂಬುವವರ ವಾಸದ ಮನೆಯ ಮೇಲೂ ಮರ ಬಿದ್ದು ಮನೆಯ ಶೀಟ್‌ಗಳು ಪುಡಿ ಪುಡಿಯಾಗಿವೆ. ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿಲ್ಲ.

ಕುಸಿದು ಬೀಳುವ ಆತಂಕ: ತಾಲ್ಲೂಕಿನ ದೋಣಿಗಾಲ್ ಬಳಿ ಅವೈಜ್ಞಾನಿಕ ರಸ್ತೆ ಕಾಮಗಾರಿಯಿಂದಾಗಿ ಹಲವು ಕುಟುಂಬಗಳು ಅಪಾಯಕ್ಕೆ ಸಿಲುಕಿವೆ. ಗ್ರಾಮದ ಬಳಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ 30 ಕುಟುಂಬಗಳು ವಾಸಿಸುತ್ತಿವೆ. ರಸ್ತೆ ನಿರ್ಮಾಣಕ್ಕೆ ಗುಡ್ಡ ಬಗೆದಿರುವುದರಿಂದ ಮನೆಗಳೇ ಕುಸಿದು ಬೀಳುವ ಆತಂಕ ನಿರ್ಮಾಣವಾಗಿದೆ.

### ವಾಡಿಕೆಗಿಂತ ಅಧಿಕ ಮಳೆ ಎಚ್ಚರಿಕೆ

ಜಿಲ್ಲೆಯಲ್ಲಿ ವಾಡಿಕೆಗಿಂತ ಅಧಿಕ ಮಳೆ ಸುರಿಯುತ್ತಿರುವುದರಿಂದ ಹೇಮಾವತಿ ಜಲಾಶಯಕ್ಕೆ ಒಳಹರಿವು ಹೆಚ್ಚಿದೆ. ಹೆಚ್ಚುವರಿ ನೀರನ್ನು ನಾಲೆಗಳ ಮುಖಾಂತರ ಕೆರೆ ಕಟ್ಟೆಗಳಿಗೆ ಹರಿಸಲು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಹೇಮಾವತಿ ಜಲಾಶಯ ಯೋಜನೆ ನೀರಾವರಿ ಸಲಹಾ ಸಮಿತಿಯಿಂದ ಸೂಚನೆ ಬಂದಿರುವ ಹಿನ್ನೆಲೆಯಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಕೆರೆ ಕಟ್ಟೆಗಳನ್ನು ತುಂಬಿಸಲು ನೀರು ಬಿಡುಗಡೆಗೆ ನಿರ್ಧರಿಸಲಾಗಿದೆ. ಜೂ.26 ರಿಂದ ನಾಲೆಗಳಿಗೆ ನೀರು ಬಿಡುಗಡೆ ಮಾಡುವ ತೀರ್ಮಾನ ಕೈಗೊಳ್ಳಲಾಗಿದೆ.

ಹೇಮಾವತಿ ನದಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರು ಹಾಗೂ ರೈತರು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಹೇಮಾವತಿ ಜಲಾಶಯ ಯೋಜನೆಯ ನೀರಾವರಿ ಸಲಹಾ ಸಮಿತಿ ಹಾಗೂ ಸೂಪರಿಂಟೆಂಡಿಂಗ್ ಎಂಜಿನಿಯರ್ ಬಿ.ಕೆ. ಜ್ಯೋತಿ ಎಚ್ಚರಿಕೆ ನೀಡಿದ್ದಾರೆ.

### ವಿದ್ಯುತ್ ಕಂಬ ಬದಲಿಸುವಾಗ ಕಾರ್ಮಿಕ ಸಾವು

ಹೊಳೆನರಸೀಪುರ: ತಾಲ್ಲೂಕಿನ ಸೋಮನಹಳ್ಳಿ ಗ್ರಾಮದಲ್ಲಿ ವಿದ್ಯುತ್ ಕಂಬ ಬದಲಿಸುವ ವೇಳೆ ಕಂಬ ಮೇಲೆ ಬಿದ್ದು ಕಾರ್ಮಿಕ ಮೃತಪಟ್ಟು ಮತ್ತೊಬ್ಬ ಗಂಭೀರ ಗಾಯಗೊಂಡಿದ್ದಾನೆ. ತಾಲ್ಲೂಕಿನ ಕೇರೆಗೋಡು ಗ್ರಾಮದ ರವಿ (45) ಮೃತರು. ಲೋಕೇಶ್ ಎಂಬುವರಿಗೆ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಭಾರೀ ಮಳೆ ಗಾಳಿ ಹಿನ್ನೆಲೆಯಲ್ಲಿ ಹಳೆಯ ವಿದ್ಯುತ್ ಕಂಬ ತೆಗೆದು ಹೊಸ ಕಂಬ ಅಳವಡಿಸುತ್ತಿದ್ದರು. ಗುತ್ತಿಗೆದಾರ ರೇಣುಕಾ ಹಾಗೂ ಸೆಸ್ಕ್ ಸಿಬ್ಬಂದಿಯೂ ಸ್ಥಳದಲ್ಲಿದ್ದರು. ಇಬ್ಬರೂ ಕಾರ್ಮಿಕರು ಹಗ್ಗ ಹಿಡಿದು ನಿಂತಿದ್ದಾಗ ಏಕಾಏಕಿ ಇವರ ಮೇಲೆ ಬಿದ್ದಿದೆ. ಹಳ್ಳಿಮೈಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಇಂದು ಶಾಲೆಗಳಿಗೆ ರಜೆ

ಮಳೆಯ ಅಬ್ಬರದ ಮುಂದುವರೆದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಬುಧವಾರ ಬುಧವಾರ ಆದ್ಮೇಲೆ ಸಕಲೇಶಪುರ, ಆಲೂರು ಹಾಗೂ ಅರಕಲಗೂಡು ತಾಲ್ಲೂಕಿನ ಅಂಗನವಾಡಿ ಹಾಗೂ ಶಾಲೆಗಳಿಗೆ ಒಂದು ದಿನ ರಜೆ ಘೋಷಿಸಲಾಗಿದೆ. ಮಲೆನಾಡು ಭಾಗದಲ್ಲಿ ಕಳೆದ ದಿನಗಳಿಂದ ನಿರಂತರವಾಗಿ ಧಾರಾಕಾರ ಮಳೆ ಸುರಿಯುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಪ್ರವಾಹದ ಭೀತಿ ಇರುವುದರಿಂದ ತಾಲ್ಲೂಕಿನ ಎಲ್ಲ ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಒಂದು ದಿನ ರಜೆ ಜಾರಿಯಲ್ಲಿರಲಿದೆ. ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಈ ತಾತ್ಕಾಲಿಕ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದ್ದಾರೆ.



ಸೂಕ್ತ ತಡೆಗೋಡೆ ಕಟ್ಟಲು ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳಿಗೆ ಮನವಿ ನೀಡಿದರೂ ನಿರ್ಲಕ್ಷ್ಯ ಮಾಡಿದ್ದಾರೆ ಎಂದು ನಿವಾಸಿ ಕೆಂಚಮ್ಮ ಆರೋಪಿಸಿದ್ದಾರೆ. ಮನವಿ ನೀಡಿದರೆ ಪ್ಲಾಸ್ಟಿಕ್ ಹೊದಿಕೆ ಹಾಕಿ ಹೋಗಿದ್ದು, ಸೂಕ್ತ ತಡೆ ಗೋಡೆ ಮಾಡಿ, ಇಲ್ಲವೇ ನಮ್ಮನ್ನ ಸ್ಥಳಾಂತರ ಮಾಡಿ ಎಂದು ಕುಟುಂಬ ಸದಸ್ಯರು ಆಗ್ರಹಿಸಿದ್ದಾರೆ. ನಿತ್ಯವೂ ಜೀವ ಭಯದಲ್ಲಿ ದಿನ ದೂಡುತ್ತಿದ್ದು, ಮಳೆ ಹೆಚ್ಚಾದಂತೆಲ್ಲಾ ಭಯವೂ ಹೆಚ್ಚಾಗಿದೆ. ಧಾರಾಕಾರ ಮಳೆಗೆ ಹೆತ್ತೂರು ಗ್ರಾಮದ ಗೌರಮ್ಮ ಎಂಬುವರಿಗೆ ಸೇರಿದ ಮನೆಯ ಒಂದು ಭಾಗದ ಗೋಡೆ ಸಂಪೂರ್ಣ ಕುಸಿದಿದೆ. ಗೋಡೆ ಬೀಳುವ ದೃಶ್ಯ ಮೊಬೈಲ್‌ನಲ್ಲಿ ಸೆರೆಯಾಗಿದೆ. ಮನೆಯ ಉಳಿದ ಭಾಗವೂ ಬೀಳುವ ಹಂತದಲ್ಲಿದೆ.

## ವೈಯಕ್ತಿಕ ದ್ವೇಷದಿಂದ ಪಿಡಿಓ ವಿರುದ್ಧ ವೃಥಾ ಆರೋಪ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಚನ್ನರಾಯಪಟ್ಟಣ ತಾಲ್ಲೂಕು ಕೆಂಬಾಳು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದೇವರಾಜೇಗೌಡ ವಿರುದ್ಧ ವೈಯಕ್ತಿಕ ದ್ವೇಷದಿಂದ ಗ್ರಾಮದ ಚಂದ್ರೇಗೌಡ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಗ್ರಾಮಸ್ಥ ಪಟೇಲ್ ಬೋರೇಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಇ-ಸ್ವತ್ತು ಮಾಡಿಕೊಡಲು ಲಂಚ ಕೇಳಿದ್ದಾರೆಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿರುದ್ಧ ಆಧಾರ ರಹಿತ ಆರೋಪ ಮಾಡಿರುವುದು ಸರಿಯಲ್ಲ. ಈ ಸಂಬಂಧ ದಾಖಲೆಗಳಿದ್ದರೆ ಎಫ್‌ಐಆರ್ ದಾಖಲಿಸಲಿ ಎಂದು ಸವಾಲೆಸೆದರು.

ಕಳೆದ ಒಂದು ವಾರದಿಂದ ಬಿದರೆ ಗ್ರಾಮದ ಚಂದ್ರೇಗೌಡ ಹಾಗೂ ಅವರ ಮಗಳು ಸೌಂದರ್ಯ ವೈಯಕ್ತಿಕ ಹಿತಾಸಕ್ತಿಗಾಗಿ ಅಧಿಕಾರಿ ಹಾಗೂ ಪಂಚಾಯಿತಿ ಹೆಸರಿಗೆ ಮಸಿ ಬಳಿಯುತ್ತಿದ್ದಾರೆ. ಕಂದಾಯ ಇಲಾಖೆ ವ್ಯಾಪ್ತಿಯ ಜಾಗದಲ್ಲಿ ಪರವಾನಗಿ ಪಡೆಯದೆ ಅನಧಿಕೃತ ಕಟ್ಟಡ ನಿರ್ಮಾಣ ಮಾಡಿದ್ದು, ಗ್ರಾಮ ಪಂಚಾಯಿತಿಗೆ ಇ-ಸ್ವತ್ತು ಮಾಡಿಕೊಂಡಲು ಅರ್ಜಿ ಸಲ್ಲಿಸಿದ್ದಾರೆ. ಇ-ಸ್ವತ್ತು ನೀಡುವ ಕುರಿತು ಪರಿಶೀಲನೆ ಅಗತ್ಯವಿದೆ ಎಂದು ಪಿಡಿಓ ತಡೆ ಹಿಡಿದಿದ್ದಾರೆ. ಸಮಗ್ರ ಪರಿಶೀಲನೆ ಬಳಿಕ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿ ಹೇಳಿದ್ದರೂ ಚಂದ್ರೇಗೌಡ ತಾಳ್ಮೆ ಕಳೆದುಕೊಂಡು ಸುದ್ದಿಗೋಷ್ಠಿ ನಡೆಸಿದ್ದಾರೆ. ಅವರ ಪುತ್ರಿ ಸೌಂದರ್ಯ ಸಹ ಸಾಮಾಜಿಕ ಜಾಲತಾಣಗಳ ಮೂಲಕ ಪಂಚಾಯಿತಿ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆಂದು ಹೇಳಿದರು.

ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ರಾಮಕೃಷ್ಣೇಗೌಡ, ಜವರೇಗೌಡ, ಗ್ರಾ.ಪಂ. ಸದಸ್ಯ ಲಕ್ಕೇಗೌಡ, ರಾಜು, ರಾಮೇಗೌಡ ಇತರರಿದ್ದರು.

## ಹೈನುಗಾರಿಕೆ ರೈತರ ಆದಾಯ ಮೂಲ: ಪ್ರಕಾಶ್



ಬೇಲೂರು: ಹೈನುಗಾರಿಕೆ ರೈತರ ಜೀವನೋಪಾಯಕ್ಕೆ ಪ್ರಮುಖ ಆಧಾರವಾಗಿದೆ ಎಂದು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಸ್.ಎನ್. ಪ್ರಕಾಶ್ ತಿಳಿಸಿದರು.

ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಒಕ್ಕೂಟ, ಹಾಸನ ಸಹಕಾರ ಹಾಲು ಒಕ್ಕೂಟ ಮತ್ತು ಸಹಕಾರ ಇಲಾಖೆಯಿಂದ ತಾಲ್ಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘದ ಸಭಾಂಗಣದಲ್ಲಿ ಸಂಘದ ಕಾರ್ಯದರ್ಶಿಗಳಿಗೆ ಏರ್ಪಡಿಸಿದ್ದ ಒಂದು ದಿನದ ಜಿಲ್ಲಾ ಮಟ್ಟದ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಹಕಾರ ಕ್ಷೇತ್ರದಲ್ಲಿ ಎಲ್ಲರನ್ನು ಒಗ್ಗೂಡಿಸಿ ಎಲ್ಲರ ಸಹಕಾರದಿಂದ ಸಂಘಗಳನ್ನು ಮುಂದುವರೆಸಿಕೊಂಡು ಹೋಗುವುದು ದೊಡ್ಡ ಸಾಧನೆ. ಇಂದಿನ ಪರಿಸ್ಥಿತಿಯಲ್ಲಿ ಹೈನುಗಾರಿಕೆ ಒಂದೇ ರೈತರ ಜೀವನೋಪಾಯಕ್ಕೆ ಆಧಾರ. ಹಾಗಾಗಿ ಸಹಕಾರ ಸಂಘಗಳು ಹೆಚ್ಚೆಚ್ಚು ಲಾಭಗಳಿಸಿ ರೈತರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಹಾಯವಾಗಬೇಕೆಂದರು.

## ಮೆಕ್ಕೆ ಜೋಳಕ್ಕೆ ಬಿಳಿಸುಳಿ ರೋಗ: ತಜ್ಞರಿಂದ ಸಮೀಕ್ಷೆ

### ಸಂಸದರ ಮನವಿಗೆ ಕೇಂದ್ರದ ಸ್ಪಂದನೆ | ಪರಿಹಾರದ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಮೆಕ್ಕೆ ಜೋಳ ಬೆಳೆಗೆ ಬಿಳಿ ಸುಳಿ ರೋಗ ಕಾಣಿಸಿಕೊಂಡಿದ್ದು ಮಂಗಳವಾರ ಕೃಷಿ ಇಲಾಖೆ ತಜ್ಞರು ಸ್ಥಳ ಪರಿಶೀಲನೆ ನಡೆಸಿದರು.

ಸಂಸದ ಶ್ರೇಯಸ್ ಪಟೇಲ್ ಅವರು ಇತ್ತೀಚೆಗೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರನ್ನು ಭೇಟಿಯಾಗಿ ಜಿಲ್ಲೆಗೆ ತಜ್ಞರ ತಂಡ ಕಳುಹಿಸಿಕೊಡಬೇಕೆಂದು ಮನವಿ ಮಾಡಿದ್ದರು. ಆ ಹಿನ್ನೆಲೆಯಲ್ಲಿ ತಜ್ಞರ ತಂಡ ಜಿಲ್ಲೆಗೆ ಆಗಮಿಸಿತು.

ಹೈದ್ರಾಬಾದ್‌ನ ಐಸಿಎಆರ್-ಐಐಎಂಆರ್, ಎಐಸಿಆರ್‌ಪಿ(ಮೆಕ್ಕೆಜೋಳ) ನೋಡಲ್ ಅಧಿಕಾರಿ ಡಾ.ಸುನೀಲ್ ನೀಲಂ, ಹೈದ್ರಾಬಾದ್ ಕೇಂದ್ರದ ಮೆಕ್ಕೆಜೋಳ ರೋಗಶಾಸ್ತ್ರಜ್ಞ ಡಾ.ಮಲ್ಲಯ್ಯ, ಮಂಡ್ಯ ಕೇಂದ್ರದ ಮೆಕ್ಕೆಜೋಳ ರೋಗಶಾಸ್ತ್ರಜ್ಞ ಡಾ.ಎನ್.ಮಲ್ಲಿಕಾರ್ಜುನ, ಯುಎಎಸ್-ಧಾರವಾಡ ಮೆಕ್ಕೆಜೋಳ ರೋಗಶಾಸ್ತ್ರಜ್ಞರಾದ ಡಾ.ಪ್ರೇಮಾ ಮತ್ತು ಯುಎಎಸ್-ಧಾರವಾಡ ಸಸ್ಯ ವಿಜ್ಞಾನಿ ಡಾ.ಸಾಲಾಕಿನ್‌ಕಾಪ್ ಮೊದಲಾದವರು ತಂಡದಲ್ಲಿದ್ದಾರೆ.

ಆರಂಭದಲ್ಲಿ ಹೊಳೆನರಸೀಪುರ ತಾಲೂಕು ಸಿಗರನಹಳ್ಳಿ ಮೂಲಕ ಅಧ್ಯಯನ ಆರಂಭಿಸಿದ ತಂಡ, ನಂತರ ಹರಿಹರಪುರ, ಹಳೇಕೋಟೆ



ಹೋಬಳಿಯಲ್ಲಿ ಮಧ್ಯಾಹ್ನದ ರವೆಗೆ ಅವಲೋಕನ ನಡೆಸಿತು.

ತರುವಾಯ ಹೊಳೆನರಸೀಪುರ, ಹಾಸನ, ರಾಯಸಮುದ್ರ, ಆಲೂರು ತಾಲ್ಲೂಕಿನ ಚನ್ನಾಪುರ, ಬೇಲೂರು ತಾಲ್ಲೂಕಿನ ಶಿವಯೋಗಿಪುರ, ಹನಿಕೆ, ಅಡವಿ ಬಂಡೇನಹಳ್ಳಿ ಹಾಗೂ ಹಾಸನದಲ್ಲಿ ಸಂಜೆವರೆಗೂ ರೋಗಬಾಧೆ ಇರುವ ಜಮೀನುಗಳಿಗೆ ತೆರಳಿ ಖುದ್ದು ಫಸಲು ವೀಕ್ಷಣೆ ಮಾಡಿತು.

ಮಾಹಿ ಸಂಗ್ರಹ-ಸಂವಾದ: ಈ ವೇಳೆ ರೈತರು ತಮಗಾಗಿರುವ ತೊಂದರೆ, ಸಮಸ್ಯೆಯನ್ನು ಹೇಳಿಕೊಂಡರು. ಸಾಲ ಮಾಡಿ ಬೆಳೆ ಬೆಳೆದಿದ್ದೇವೆ. ಈಗ ನಷ್ಟವಾಗಿದ್ದು, ಅದನ್ನು ಭರಿಸಿಕೊಡಲು ತಾವು ನೆರವಾಗಬೇಕು ಎಂದು ವಿನಂತಿಸಿದರು. ಈ ವೇಳೆ ಮೆಕ್ಕೆಜೋಳ ಬೆಳೆಗಾರರೊಂದಿಗೆ ಸಂವಾದ ನಡೆಸಿದ ತಜ್ಞರ ತಂಡ ಮಾಹಿತಿ ಕಲೆ ಹಾಕಿತು. ಬೆಳೆಗಳಿಗೆ ತಗುಲಿರುವ ರೋಗದ ಕುರಿತು ಮಾಹಿತಿ ಸಂಗ್ರಹಿಸಿದರು. ಇದೇ ವೇಳೆ ಹಾನಿಗೊಳಗಾದ ಸಸ್ಯಗಳ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯ ಪರೀಕ್ಷೆಗಾಗಿ ಕಳುಹಿಸಿಕೊಡುವುದಾಗಿ ಹೇಳಿದರು.

ಅಲ್ಲಿಂದ ವರದಿ ಬಂದ ಬಳಿಕ ಬಿಳಿರೋಗದ ಲಕ್ಷಣ, ಯಾವ ಕಾರಣಕ್ಕೆ ಬರಲಿದೆ, ಇದನ್ನು ತಡೆಗಟ್ಟಲು ಮಾರ್ಗೋಪಾಯಗಳೇನು ಎಂಬುದು ತಿಳಿಯುವ ಸಾಧ್ಯತೆ ಎಂದು ತಂಡದ ಸದಸ್ಯರು ತಿಳಿಸಿದರು.

ಹಾಗೆಯೇ ಮೆಕ್ಕೆಜೋಳ ಬೆಳೆಗಾರರೂ ಸಹ, ತಜ್ಞರ ತಂಡ ನಮ್ಮ ಜಿಲ್ಲೆಗೆ ಆಗಮಿಸಿರುವುದು ಸಂತೋಷದ ವಿಚಾರ. ಆದಷ್ಟು ಬೇಗ ಲ್ಯಾಬ್ ವರದಿ ಏನೆಂದು ನಮಗೆ ತಿಳಿಸಬೇಕು. ಬಿಳಿ ಸುಳಿ ರೋಗವನ್ನು ಕೊನೆಗಾಣಿಸಲು ಪರಿಹಾರ ಮಾರ್ಗ ಸೂಚಿಸಬೇಕು. ಈ ರೋಗವನ್ನು ಶಾಶ್ವತವಾಗಿ ಕೊನೆಗಾಣಿಸಲು ಬೇಕಾದ ಸಲಹೆಯನ್ನೂ ನೀಡಬೇಕು ಎಂದು ಮನವಿ ಮಾಡಿದರು.

## ಗುರು-ಶಿಷ್ಯರ ಸಂಬಂಧಕ್ಕೆ ಪ್ರೀತಿಯ ಬಂಧನ

### ಚಿಂತಕ ಅರವಿಂದ ಚೊಕ್ಕಾಡಿ ಅಭಿಮತ | ಸ್ಕಾಲರ್ಸ್ ಶಾಲೆಯಿಂದ ಹಲ್ಮಿಡಿಯಲ್ಲಿ ಅಕ್ಷರಾಭ್ಯಾಸ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಭಾರತೀಯ ಸಂಸ್ಕೃತಿಯಲ್ಲಿ ಶಿಕ್ಷಣ ಪದ್ಧತಿಗೆ ಅರ್ಥಪೂರ್ಣ ಸಂಸ್ಕಾರದ ಚೌಕಟ್ಟಿದೆ. ಗುರು-ಶಿಷ್ಯರ ಅವಿನಾಭಾವ ಸಂಬಂಧಕ್ಕೆ ಪ್ರೀತಿ ಮತ್ತು ಭಕ್ತಿಯ ಬಂಧವಿದೆ ಎಂದು ಶಿಕ್ಷಣ ತಜ್ಞ ಅರವಿಂದ ಚೊಕ್ಕಾಡಿ ಹೇಳಿದರು.

ಬೇಲೂರು ತಾಲ್ಲೂಕಿನ ಹಲ್ಮಿಡಿಯಲ್ಲಿನ ಶಿಲಾಶಾಸನ ಸ್ತಂಭದ ಆವರಣದಲ್ಲಿ ಸ್ಕಾಲರ್ಸ್ ಶಿಕ್ಷಣ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ 14ನೇ ವರ್ಷದ ಅಕ್ಷರಾಭ್ಯಾಸ ಸಮಾರಂಭದಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಿ ಮಾತನಾಡಿದರು.

ವಿದ್ಯಾಭ್ಯಾಸ ಒಂದು ಮಂಗಳ ಮುಹೂರ್ತದ ಶುಭ ಸಂದರ್ಭದಲ್ಲಿ



ಆರಂಭವಾಗಬೇಕು. ಅದುವೇ ಅಕ್ಷರಾಭ್ಯಾಸ. ಸ್ಕಾಲರ್ಸ್ ಶಿಕ್ಷಣ ಸಂಸ್ಥೆಯವರು ಪಡುವಣ ಘಟ್ಟಗಳ ಮೆಟ್ಟಿಲು, ಶಿಲ್ಪಕಲೆಗಳ ತೊಟ್ಟಿಲು, ಬೇಲೂರು ತಾಲ್ಲೂಕಿನ ಹಲ್ಮಿಡಿಯಲ್ಲಿ ಸಮಾರಂಭ ಏರ್ಪಡಿಸಿರುವುದು ಶ್ಲಾಘನೀಯ ಎಂದರು.


ಅಕ್ಷರಂ ಪರಂ ಬ್ರಹ್ಮ ಎನ್ನುತ್ತಾರೆ. ಅ ಎಂದರೆ ನಾಶವಿಲ್ಲದ್ದು ಎಂದರ್ಥ. ವ್ಯಕ್ತಿ ನಾಶವಾಗುತ್ತಾನೆ ಹೊರತು ಅಕ್ಷರಕ್ಕೆ ಅಳಿವಿಲ್ಲ ಎಂದು ತಿಳಿಸಿದರು.

ಮಕ್ಕಳನ್ನು ಸರಿಯಾದ ದಾರಿಯಲ್ಲಿ ಬೆಳೆಸಬೇಕಾದ ಗುರುತರ ಜವಾಬ್ದಾರಿ ಪೋಷಕರ ಮೇಲಿದೆ. ಶಿಕ್ಷಕರು ಹಾಗು ಪೋಷಕರು ವಿದ್ಯಾರ್ಥಿಗಳನ್ನು ಒಳ್ಳೆಯ ದಾರಿಯಲ್ಲಿ ಕೊಂಡೊಯ್ಯಬೇಕು. ಶಿಕ್ಷರು ಪಠ್ಯ ಬೋಧನೆ ಮಾಡುವ ಜೊತೆಗೆ ಮಾನವೀಯ ಮೌಲ್ಯಗಳನ್ನು ಕಲಿಸಿಕೊಡಬೇಕು. ಕಲಿಯಲು ಮುಕ್ತ ವಾತಾವರಣ ಸೃಷ್ಟಿಸಬೇಕು ಎಂದರು.

ಅತಿಥಿ ಸಂಗೀತಾ ಶ್ರೀಕಾಂತ್ ಮಾತನಾಡಿ, ಮಕ್ಕಳ ಮೇಲೆ ಒತ್ತಡ ಹೇರಬಾರದು. ಅವರ ಸ್ವಾತಂತ್ರ್ಯ ಕಸಿದುಕೊಳ್ಳದಿದ್ದರೆ ಇಷ್ಟದ ಕ್ಷೇತ್ರಗಳಲ್ಲಿ ಗುರುತರ ಸಾಧನೆ ಮಾಡುತ್ತಾರೆ. ಮಕ್ಕಳ ಆಯ್ಕೆಯನ್ನು ಪ್ರೋತ್ಸಾಹಿಸಿ ಸರಿ-ತಪ್ಪುಗಳ ಬಗ್ಗೆ ಅರಿವು ಮೂಡಿಸಬೇಕೆಂದು ಸಲಹೆ ನೀಡಿದರು.

ಶಾಲೆಯ ಆಡಳಿತಾಧಿಕಾರಿ ಡಾ. ಹೆಚ್.ಎನ್. ಚಂದ್ರಶೇಖರ್, ಕಾರ್ಯದರ್ಶಿ ಮಮತಾ ಚಂದ್ರಶೇಖರ್ ಹಾಗು ಇತರರಿದ್ದರು. ಶಾಲೆಗೆ ಹೊಸದಾಗಿ ದಾಖಲಾದ ಮಕ್ಕಳಿಗೆ ಕನ್ನಡದ ಮೊಟ್ಟಮೊದಲ ಶಿಲಾಶಾಸನದ ಪ್ರತಿರೂಪವಿರಿಸಿರುವ ಸ್ತಂಭದ ಆವರಣದಲ್ಲಿ ಅಕ್ಷರಾಭ್ಯಾಸ ಮಾಡಿಸಲಾಯಿತು. ಮಕ್ಕಳ ಪಾಲಕರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

## ಎಸ್‌ಬಿಐ 70ನೇ ವರ್ಷಾಚರಣೆ: ರಕ್ತದಾನ ಶಿಬಿರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸ್ಟೇಟ್ ಬ್ಯಾಂಕ್ ಇಂಡಿಯಾದ 70ನೇ ವರ್ಷಾಚರಣೆ ಅಂಗವಾಗಿ ನಗರದ ರೆಡ್ ಕ್ರಾಸ್ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ 101 ಜನರು ರಕ್ತದಾನ ಮಾಡಿದರು.

ಸಮಾರಂಭ ಉದ್ಘಾಟಿಸಿದ ಎಸ್‌ಬಿಐ ಪ್ರಾದೇಶಿಕ ವ್ಯವಸ್ಥಾಪಕ ಕನ್ಹಯ್ಯ ಲಾಲ್ ಗೋಪಾಲೀ ಮಾತನಾಡಿ, 200 ವರ್ಷಗಳ ಇತಿಹಾಸ ಹೊಂದಿರುವ ಎಸ್‌ಬಿಐ ಭಾರತದ ಅತಿದೊಡ್ಡ ಬ್ಯಾಂಕ್ ಆಗಿದೆ. ಬ್ಯಾಂಕ್ ಆಫ್ ಕಲ್ಕತ್ತಾ ಎಂದು ಶುರುವಾಗಿ ತದನಂತರ ಇಂಪಿರಿಯಲ್ ಬ್ಯಾಂಕ್ ಆಫ್ ಇಂಡಿಯಾ ಎಂದು 1955ರ ಜು. 1ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂದು ಮರುನಾಮಕರಣ ಮಾಡಲಾಯಿತು ಎಂದು ತಿಳಿಸಿದರು.

ಜಿಲ್ಲಾ ರೆಡ್ ಕ್ರಾಸ್ ಖಜಾಂಚಿ ಹೆಚ್.ಡಿ. ಜಯೇಂದ್ರ ಕುಮಾರ್ ಮಾತನಾಡಿ, ರಕ್ತದಾನಿಗಳ ಅವಶ್ಯಕತೆ ಹೆಚ್ಚಿದ್ದು ಕಡಿಮೆ ಸಮಯದ ಪ್ರಚಾರ ಮಾಡಿದರೂ ಸಾಕಷ್ಟು ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.

ಆರೋಗ್ಯವಂತರು ತಪ್ಪದೇ ರಕ್ತದಾನ ಮಾಡಬೇಕು ಎಂದು ಹೇಳಿದರು.

ನಿರ್ದೇಶಕ ಡಾ. ವಿ.ಕೆ. ಅಬ್ದುಲ್ ಬಶೀರ್ ಮಾತನಾಡಿ, ರಕ್ತವನ್ನು ಕೃತಕವಾಗಿ ತಯಾರಿಸಲು ಸಾಧ್ಯವಿಲ್ಲ ಮತ್ತು ಕೋಟಿ ರೂಪಾಯಿ ಕೊಟ್ಟರು ರಕ್ತವನ್ನು ಸೃಷ್ಟಿ ಮಾಡಲು ಅಸಾಧ್ಯ. ಹೀಗಾಗಿ ರಕ್ತದಾನ ಮಾಡಬೇಕೆಂದು ತಿಳಿಸಿದರು.

# ನಿರಂತರ ಮಳೆ: ಕಾಫಿಗೆ ಕೊಳೆ ರೋಗ ಭೀತಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಲೆನಾಡಿನಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆ ಪರಿಣಾಮ ಅತಿಯಾದ ಶೀತದಿಂದ ಕಾಫಿಗೆ ಕೊಳೆ ರೋಗ ತಗುಲುತ್ತಿದ್ದು ಕಾಫಿ ಫಸಲು ಉದುರುತ್ತಿದೆ.

ಕಳೆದ 20 ದಿನಗಳಿಂದ ಸಕಲೇಶಪುರ, ಬೇಲೂರು, ಆಲೂರು ಭಾಗದಲ್ಲಿ ಜೋರು ಮಳೆ ಸುರಿಯುತ್ತಲೇ ಇದೆ. ಕಾಫಿಯಿಂದ ಉತ್ತಮ ಆದಾಯದ ನಿರೀಕ್ಷೆಯಲ್ಲಿದ್ದ ಬೆಳೆಗಾರರಿಗೆ ಮಳೆ ಶಾಪವಾಗಿ ಪರಿಣಮಿಸಿದೆ. ಜಿಲ್ಲೆಯಲ್ಲಿ ಪೂರ್ವ ಮುಂಗಾರು ಹಾಗೂ ಮೃಗಶಿರ ಮಳೆ ಅಬ್ಬರ ಜೋರಾಗಿರುವುದು ಬೆಳೆಗಾರರನ್ನು ಕಂಗೆಡಿಸಿದೆ. ಕಳೆದ ವರ್ಷ ಭಾರೀ ಮಳೆಯಿಂದ ಕಾಫಿ ಫಸಲು ಅರ್ಧದಷ್ಟು ನೆಲಕಚ್ಚಿತ್ತು. ಕಾಫಿಗೆ ಹಿಂದೆಂದೂ ಕಾಣದ ಬಂಗಾರದ ಬೆಲೆ ಬಂದಿತ್ತು. ಕೆಲವೇ ಕೆಲವು ಬೆಳೆಗಾರರು ಅಧಿಕ ಲಾಭ ಗಳಿಸಿದರೆ ಉಳಿದ ಹಲವರಿಗೆ ಖರ್ಚು ಮಾಡಿದ ಹಣ ದಕ್ಕಿದ್ದರೆ, ಬಹುತೇಕರು ನಷ್ಟ ಅನುಭವಿಸಿದ್ದರು. ಈಗಾಗಲೇ ಗಿಡಗಳಲ್ಲಿ ಕಾಫಿ ಕಾಯಿಗಟ್ಟಿದ್ದು ದಪ್ಪವಾಗುತ್ತಿವೆ. ಈ ಕಾಫಿ ಗೊಂಚಲಿನಲ್ಲೇ ಕೊಳೆತು ನಾಶವಾಗುವುದು ಕಂಡುಬಂದಿದೆ. ಇದರೊಂದಿಗೆ ಉದುರುವಿಕೆಯೂ ಅಧಿಕವಾಗುತ್ತಿದ್ದು, ಬೆಳೆಗಾರರು ಆತಂಕ ಎದುರಿಸುತ್ತಿದ್ದಾರೆ.

ಈ ಬಾರಿ ಕಾಫಿ ಹೂವು ಬಿಡುವ ಸಂದರ್ಭದಲ್ಲಿ ಕೆಲವು ಕಡೆ ಉತ್ತಮ ಮಳೆಯಾದರೆ ಉಳಿದೆಡೆ ಕೊಳವೆ ಬಾವಿಗಳಿಂದ ನೀರು ಹಾಯಿಸಿದ್ದರು. ಇದರಿಂದ ಫಸಲು ಚೆನ್ನಾಗಿ ಬಂದಿತ್ತು. ಆದರೆ ಭಾರೀ ಮಳೆಯಿಂದಾಗಿ ತೀವ್ರ ಪರಿಣಾಮ ಉಂಟಾಗಿದೆ. ಇನ್ನೂ ಮೂರು ತಿಂಗಳ ಕಾಲ ಮಳೆಗಾಲವಿದ್ದು ಮತ್ತೆ ಮಳೆಯಾದರೆ ಬೆಳೆ ಸಂಪೂರ್ಣ ನಾಶವಾಗುವ ಭೀತಿ ಕಾಡುತ್ತಿದೆ.



## ಇಳಿದ ಕಾಫಿ ಧಾರಣೆ

ಧಾರಣೆ ಇದ್ದಾಗ ಕಾಫಿ ಮಾರಾಟ ಮಾಡದೆ ಕಾದು ನೋಡುವ ತಂತ್ರ ಅನುಸರಿಸಿದ ಬೆಳೆಗಾರರು ಈಗ ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾಫಿ ಕೊಯ್ಲು ನಡೆಸುವ ವೇಳೆಯೇ ಸಾರ್ವಕಾಲಿಕ ದಾಖಲೆ ಬೆಲೆ ಕಂಡರೂ ಮಾರಾಟ ಮಾಡದ ಬೆಳೆಗಾರರು ಈಗ ಮಾರಾಟ ಮಾಡಲು ಮುಂದಾಗಿದ್ದಾರೆ. ಆದರೆ ಕೊಳ್ಳುವವರ ಸಂಖ್ಯೆ ತೀರಾ ಕಡಿಮೆಯಾಗಿರುವುದು ಸಮಸ್ಯೆಯ ಮೂಲವಾಗಿದೆ.

ತಾಲ್ಲೂಕಿನಲ್ಲಿ ನಿರಂತರ ಮಳೆಯಾಗುತ್ತಿರುವುದರಿಂದ ಶೇಖರಿಸಿಟ್ಟಿರುವ ಕಾಫಿ ಈಗಾಗಲೇ ತೇವಾಂಶ ಹೀರಿದ್ದು ಕಾಫಿ ಕೊಳ್ಳಲು ವ್ಯಾಪಾರಿಗಳು ಮೀನಮೇಷ ಎದುರಿಸುತ್ತಿದ್ದಾರೆ. ಮಾರುಕಟ್ಟೆಯಲ್ಲಿ ನಿತ್ಯ ಬೆಲೆ ಇಳಿಕೆಯಾಗುತ್ತಿದ್ದು, ಮಾರ್ಚ್‌ನಲ್ಲಿ 505 ರೂ.ಗಳಿದ್ದ ಒಟಿ ಧಾರಣೆ 380ಕ್ಕೆ ಕುಸಿದಿದೆ. ಈ ಪ್ರಕಾರ ಒಟಿ ಧಾರಣೆ 505 ರೂ.ಗಳಿದ್ದ ವೇಳೆ 50 ಕೆ.ಜಿ. ರೋಬಸ್ಟ ಕಾಫಿಗೆ 14 ಸಾವಿರ ರೂ.ಗೂ ಅಧಿಕ ಧಾರಣೆ ದೊರೆತರೆ ಈಗ ಇದೇ ಒಟಿ ಧಾರಣೆ ಇರುವ ಕಾಫಿಗೆ 10,500 ರೂ.ಗಳಾಗಲಿದೆ.

# ಜೂ. 26ಕ್ಕೆ ಎಕ್ಸ್ ಅಂಡ್ ವೈ ಸಿನಿಮಾ ತೆರೆಗೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಇನ್ನು ಜನಿಸದೆ ಇರುವ ಮಗು ತಾನು ದೊಡ್ಡವನಾದ ಮೇಲೆ ಏನೇನು ಮಾಡಬೇಕು ಹೇಗೆ ಬದುಕಬೇಕು ಎಂಬ ವಿಶೇಷ ಚಿಂತನೆಗಳ ವಿಭಿನ್ನ ಕಥೆಯಾಧರಿಸಿ ಮಾಡಿರುವ ಎಕ್ಸ್ ಅಂಡ್ ವೈ ಸಿನಿಮಾ ಜೂ. 26 ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಡಿ. ಸತ್ಯಪ್ರಕಾಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಕ್ಕಳನ್ನು ಹೇಗೆ ಪ್ರೀತಿಸಬೇಕು. ಹೇಗೆ ಬೆಳೆಸಬೇಕು ಎಂಬುದನ್ನು ಸಿನಿಮಾ ಹೇಳುತ್ತದೆ. ನಾನು ಇರುವ ಸಮಾಜ ಹಾಗು ಜಾಗ ಹೀಗೆ ಇರಬೇಕು ಎಂದು ತಾಯಿಯ ಗರ್ಭದಲ್ಲಿರುವಾಗ ಮಗು ಬಯಸುತ್ತದೆ. ಆ ಎಳೆ ಇಟ್ಟುಕೊಂಡು ಕಥೆ ರಚಿಸಿದ್ದು ಈ ಬಗೆಯ ಸಿನಿಮಾಗಳು ಈ ವರೆಗೆ ಬಂದಿಲ್ಲ ಎಂದರು.

ಎಲ್ಲಾ ಮಲ್ಟಿಪೆಕ್ಸ್ ಹಾಗು 40 ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನಗೊಳ್ಳಲಿದೆ. ಸಾರ್ವಜನಿಕರ ಪ್ರೋತ್ಸಾಹ ಸಿಕ್ಕರೆ ಮತ್ತಷ್ಟು ಕಡೆ ಬಿಡುಗಡೆ ಮಾಡಲು ತಯಾರಿ ಮಾಡಿಕೊಂಡಿದ್ದೇವೆ. ಚಿತ್ರದಲ್ಲಿ ಐದು ಹಾಡುಗಳಿದ್ದು ಸತ್ಯ ಪಿಕ್ಚರ್ಸ್ ಬ್ಯಾನರ್ ಅಡಿ ಸಿನಿಮಾ ಬಿಡುಗಡೆಯಾಗಲಿದೆ ಎಂದು ಹೇಳಿದರು.

ಅಥರ್ವ ಪ್ರಕಾಶ್ ನಾಯಕ ನಟ ಹಾಗೂ ಬೃಂದಾ ಆಚಾರ್ಯ ನಾಯಕಿಯಾಗಿ ನಟಿಸಿದ್ದಾರೆ. ದೊಡ್ಡಣ್ಣ, ವೀಣಾ ಸುಂದರ್ ಹೀಗೆ ದೊಡ್ಡ ತಾರಾಬಳಗವಿದೆ. ಹಾಸನದ ಪೃಥ್ವಿ ಚಿತ್ರಮಂದಿರದಲ್ಲಿ ಬಿಡುಗಡೆಯಾಗಲಿದೆ ಎಂದರು.

ನಾಯಕ ಹಾಗೂ ನಟ ಮಾತನಾಡಿದರು. ಅಖಿಲ ಭಾರತ ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್ ಇದ್ದರು.




# ದೇಗುಲ ಸಮಿತಿಯಿಂದ ಜಾಗ ಒತ್ತುವರಿ ಆಗಿಲ್ಲ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಬಿಕ್ಕೋಡು ಕೇಂದ್ರದಲ್ಲಿರುವ ಬಲಮುರಿ ಗಣಪತಿ ದೇವಾಲಯ ನಿರ್ವಹಣೆಗೆ ಸಮಸ್ಯೆಯಾಗುತ್ತಿರುವ ಹಿನ್ನಲೆಯಲ್ಲಿ ಖಾಲಿ ಜಾಗದಲ್ಲಿ ಮಳಿಗೆ ನಿರ್ಮಿಸಲು ಉದ್ದೇಶಿಸಲಾಗಿತ್ತು. ಸುಖಾ ಸುಮ್ಮನೆ ಜಾಗ ಒತ್ತುವರಿ ಆರೋಪ ಹೊರಿಸುತ್ತಿದ್ದಾರೆ ಎಂದು ಗಣಪತಿ ಸೇವಾ ಸಮಿತಿ ಅಧ್ಯಕ್ಷ ಬಸವರಾಜು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ದೇವಸ್ಥಾನವನ್ನು ಆಟೋ ಸಂಘದವರೇ ನಿರ್ವಹಿಸುವುದಾದರೆ ಬಿಟ್ಟುಕೊಡಲು ಸಿದ್ಧರಿದ್ದೇವೆ ಎಂದು ಹೇಳಿದರು.

ಬಲಮುರಿ ಗಣಪತಿ ದೇಗುಲ ಈ ಹಿಂದೆ ಅಂಚೆ ಮತ್ತು ತಂತಿ ಇಲಾಖೆಯ ನಿವೇಶನವಾಗಿತ್ತು. ಈ ನಿಟ್ಟಿನಲ್ಲಿ ಅಂಚೆ ಮತ್ತು ತಂತಿ ಇಲಾಖೆ, ಕಾನೂನು ಬದ್ಧವಾಗಿ ಪರ್ಯಾಯ ನಿವೇಶನ ಒದಗಿಸಿಕೊಟ್ಟು ದೇಗುಲ ನಿರ್ಮಿಸಿ 18 ವರ್ಷ ಕಳೆದಿದೆ. 300 ಅಜೀವ ಸದಸ್ಯತ್ವವನ್ನು ಹೊಂದಿರುವ ದೇಗುಲದಲ್ಲಿ ನಿತ್ಯ ತ್ರಿಕಾಲಪೂಜೆ ಮತ್ತು ಹಬ್ಬ ಹರಿದಿನಗಳು ಸೇರಿದಂತೆ ಹುಣ್ಣಿಮೆ ಅಮಾವಾಸೆ ಕಾರ್ಯಕ್ರಮಗಳು ಏಕಾದಶಿ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ದೇಗುಲದ ನಿರ್ವಹಣೆ ಕಷ್ಟವಾದ ಕಾರಣ ನಾವು ದೇಗುಲದ ಮುಂದೆ ಖಾಲಿ ಇರುವ ನಿವೇಶನದಲ್ಲಿ ಐದು ಮಳಿಗೆಗಳನ್ನು ನಿರ್ಮಿಸಲು ಮುಂದಾಗಿದ್ದು, ಈಗಾಗಲೇ ಕಾಮಗಾರಿ ಪ್ರಗತಿಯಲ್ಲಿದೆ. ಐದು ಮಳಿಗೆಯ ಪಕ್ಕದಲ್ಲಿ ಆಟೋ ನಿಲ್ದಾಣಕ್ಕೆ ದೇಗುಲದವರೇ ಅವಕಾಶ ಮಾಡಿಕೊಟ್ಟಿದ್ದಾರೆ. ಅವರು ಕೂಡ ಮಳಿಗೆಗಳ ನಿರ್ಮಾಣಕ್ಕೆ ಸಹಕಾರ ನೀಡಿದ್ದಾರೆ. ಆದರೆ ಯಾರೊಬ್ಬರೂ ಹೇಳಿಕೆಯ ಮಾತುಗಳನ್ನು ಕೇಳಿಕೊಂಡು ಆಟೋ ಸಂಘದವರು ಪ್ರತಿಭಟನೆ ಮಾಡಿದ್ದಾರೆ ಎಂದು ಆರೋಪಿಸಿದರು.

ಖಜಾಂಚಿ ಶಿವಶಂಕರ್ ಮಾತನಾಡಿ, ಸಾಮರಸ್ಯ ಮತ್ತು ಸೌಹಾರ್ದತೆಯಿಂದ ಇರುವ ತಾಣದಲ್ಲಿ ಕೆಲವರು ವಿನಾಕಾರಣ ಗಲಭೆ ಸೃಷ್ಟಿಸಲು ಮುಂದಾಗಿದ್ದಾರೆ. ದೇಗುಲ ನಿರ್ಮಿಸುವ ಸಂದರ್ಭದಲ್ಲಿ ಬಿಕ್ಕೋಡಿನಲ್ಲಿ ಆಟೋಗಳೆ ಇರಲಿಲ್ಲ. ಎರಡ್ಮೂರು ಆಟೋಗಳಿಗೆ ನಾವೇ ಸ್ಥಳಾವಕಾಶ ಮಾಡಿಕೊಟ್ಟಿದ್ದೆವು. ದೇಗುಲದ ವರಮಾನಕ್ಕೋಸ್ಕರ ಮಳಿಗೆಗಳನ್ನು ನಿರ್ಮಿಸಲು ಆಟೋ ಸಂಘದವರು ಕೂಡ ಸಹಕಾರ ನೀಡಿದ್ದಾರೆ. ಆದರೆ ಕೆಲವರು ಸ್ವಾರ್ಥದಿಂದ ಅಡ್ಡಿಪಡಿಸುತ್ತಿದ್ದಾರೆ ಎಂದು ದೂರಿದರು.

ಬಿಕ್ಕೋಡು ಶ್ರೀ ಬಲಮುರಿ ಗಣಪತಿ ದೇಗುಲ ಸೇವಾ ಸಮಿತಿ ಕಾರ್ಯಾಧ್ಯಕ್ಷ ರಾಜಶೆಟ್ಟಿ, ಪ್ರಧಾನ ಕಾರ್ಯದರ್ಶಿ ರತನಕುಮಾರ್, ನಿರ್ದೇಶಕ ಮೋಹನ್ ರಾಜ್ ಹಾಜರಿದ್ದರು.




# ಪಠ್ಯ ಅಧ್ಯಯನ ಜತೆಗೆ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಸ್ಪರ್ಧಾತ್ಮಕ ಯುಗಕ್ಕೆ ತಕ್ಕಂತೆ ಸರ್ಕಾರಿ ಮತ್ತು ಖಾಸಗಿ ಶಾಲೆಗಳು ಶಿಕ್ಷಣ ನೀಡುತ್ತಿವೆ. ಜೊತೆಗೆ ವಿದ್ಯಾರ್ಥಿಗಳಿಗೆ ಸಾಮಾನ್ಯ ಜ್ಞಾನ ನೀಡುವತ್ತ ಗಮನ ಹರಿಸಬೇಕು ಎಂದು ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಸಿ.ಎಂ. ನಿಂಗರಾಜ್ ಹೇಳಿದರು.

ತಾಲ್ಲೂಕಿನ ತಾರಿಮರ ಸರ್ಕಾರಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಕಲಿಕಾ ಸಾಮಾಗ್ರಿ ವಿತರಿಸಿ ಮಾತನಾಡಿದ ಅವರು, ಪುಸ್ತಕ ಜ್ಞಾನದಂತೆ ಸಾಮಾನ್ಯ ಜ್ಞಾನ ವ್ಯಕ್ತಿತ್ವ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವ ಮಕ್ಕಳು ಪ್ರಚಲಿತ ವಿದ್ಯಮಾನಗಳನ್ನು ಹೆಚ್ಚು ಹೆಚ್ಚು ಓದಬೇಕು ಎಂದರು.

ಸಾಹಿತ್ಯ, ಸಂಗೀತ, ಕಲೆ, ಶಿಲ್ಪ, ನೃತ್ಯ, ಕ್ರೀಡೆ, ಪ್ರಸ್ತುತ ರಾಜಕೀಯ ಸನ್ನಿವೇಶಗಳ ಜ್ಞಾನವನ್ನು ಪಡೆದುಕೊಳ್ಳಬೇಕಿದೆ. ಆಗಮಾತ್ರ ಸ್ಪರ್ಧಾತ್ಮಕ ಯುಗದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ. ವಚನ ಸಾಹಿತ್ಯ ನಾಯಕತ್ವ ಗುಣ ಬೆಳೆಸಿಕೊಳ್ಳಲು ನೆರವಾಗುತ್ತದೆ. ಸಮಯಪ್ರಜ್ಞೆ, ಮೌಲ್ಯಯುತ ಹಾಗೂ ಗುಣಾತ್ಮಕ ಶಿಕ್ಷಣ ವಿದ್ಯಾರ್ಥಿಗಳಿಗೆ ಪೂರಕವಾಗಲಿದೆ. ಶಿಕ್ಷಕರು ಮತ್ತು ಪೋಷಕರು ಶಿಕ್ಷಣದ ಜೊತೆಯಲ್ಲಿ ಮಕ್ಕಳಿಗೆ ಸಂಸ್ಕಾರ ನೀಡಬೇಕು ಎಂದು ಹೇಳಿದರು.

ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ತೀರ್ಥಕುಮಾರಿ ವೆಂಕಟೇಶ್ ಮಾತನಾಡಿ, ಇತ್ತೀಚಿನ ದಿನದಲ್ಲಿ ಶಿಕ್ಷಣವಂತರೇ ಹೆಚ್ಚು ಮೌಢ್ಯದ ದಾಸರಾಗುತ್ತಿರುವುದು ಶೋಚನೀಯ, ಮಕ್ಕಳಿಗೆ ವೈಜ್ಞಾನಿಕ ಮತ್ತು ವೈಚಾರಿಕತೆ ಪ್ರಜ್ಞೆಯನ್ನು ಬೆಳೆಸಬೇಕು. ಪ್ರತಿಯೊಂದು ವಿಷಯಗಳನ್ನು ಕಲಿಯುವ ಮೊದಲು ಪ್ರಶ್ನಿಸುವ ಗುಣ ಬೆಳೆಸಬೇಕಿದೆ. ಜಾತಿ, ಧರ್ಮಗಳ ಲೇಪನವನ್ನು ತೊರೆದು ಸಾಮರಸ್ಯದ ಬದುಕಿನ ಕಡೆ ಸಾಗುವ ಹಾಗು ಪೋಷಕರ ಬಗ್ಗೆ ಗೌರವಾಭಿಮಾನ ಬೆಳೆಸುವ ನಿಟ್ಟಿನಲ್ಲಿ ಮಕ್ಕಳಿಗೆ ಅರಿವು ಮೂಡಿಸಬೇಕು ಎಂದರು.

ಮುಖ್ಯಶಿಕ್ಷಕ ಕರಿಬಸಪ್ಪ, ಯಶೋಧ ನಿಂಗರಾಜ್, ಅಮೂಲ್ಯ ರಾಜ್, ಸಹ ಶಿಕ್ಷಕರಾದ ಈಶ್ವರಪ್ಪ, ಸುರೇಶ್, ಶಶಿಧರ್, ಯಮುನಾ, ಧರ್ಮರಾಜ್, ದಿಲೀಪ್, ಪದ್ಮ ಇತರರಿದ್ದರು.



# ಕೆರೆಯಲ್ಲಿ ಮುಳುಗಿ ವ್ಯಕ್ತಿ ಮೃತ

ಹಳೇಬೀಡು: ಪಟ್ಟಣದ ದ್ವಾರಸಮುದ್ರ ಕೆರೆಯಲ್ಲಿ ಮುಳುಗಿ ವ್ಯಕ್ತಿ ಮೃತಪಟ್ಟಿರುವ ಘಟನೆ ಮಂಗಳವಾರ ನಡೆದಿದೆ.

ಪಿರಿಯಾಪಟ್ಟಣ ಮೂಲದ ಸುರೇಶ್ (35) ಮೃತರು. ಹಲವು ವರ್ಷಗಳಿಂದ ಹಳೇಬೀಡಿನ ಸಲೂನ್ ಒಂದರಲ್ಲಿ ಕೆಲಸ ಮಾಡಿಕೊಂಡಿದ್ದರು. ತುಂಬಿದ ಕೆರೆಯಲ್ಲಿ ಈಜುತ್ತಿದ್ದಾಗ ವಾಪಾಸ್ ಬರಲು ಸಾಧ್ಯವಾಗದೆ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಸ್ಥಳೀಯ ಈಜುಗಾರರು ಹಾಗು ಅಗ್ನಿಶಾಮಕ ಸಿಬ್ಬಂದಿ ಶವವನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗೆ ರವಾನಿಸಿದರು. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕೆಲವರಿಂದ ಸಂಘ ಒಡೆಯುವ ಯತ್ನ: ಆರೋಪ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಛಲವಾದಿ ಸಂಘವು ಕೆ. ಶಿವರಾಂ ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಸಾಗುತ್ತಿದೆ. ಆದರೆ ಕೆಲವರು ಸಂಘದಲ್ಲೇ ಇದ್ದು ಸ್ವ ಪ್ರತಿಷ್ಠೆಗಾಗಿ ಸಂಘಟನೆ ಒಡೆಯುವ ಯತ್ನಿಸುತ್ತಿದ್ದಾರೆ ಎಂದು ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ಲೋಕೇಶ್ ಆರೋಪಿಸಿದರು.

ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ ಆಯೋಜಿಸಿದ್ದ ತಾಲ್ಲೂಕು ಛಲವಾದಿ ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿ, ಜನಾಂಗದ ಸೇವೆ ಮಾಡುವವರೇ ನಿಜವಾದ ನಾಯಕರು. ಸಮಾಜವನ್ನು ಕಟ್ಟುವ ಕೆಲಸ ಮೊದಲು ಮಾಡಬೇಕು. ಕೆಲವರು ಸಂಘದ ಒಳಗೆ ಇದ್ದು ಒಡೆಯುವ ಕೆಲಸಕ್ಕೆ ಸಂಚು ಮಾಡುತ್ತಿದ್ದಾರೆ. ಅಂತವರನ್ನು ಗುರುತಿಸಿ ಎಲ್ಲರೂ ಹೊರಹಾಕಿದರೆ ಸಂಘ ಸದೃಢವಾಗುತ್ತದೆ. ಸಂಘವನ್ನು ಸ್ವಂತಕ್ಕೆ ಬಳಕೆ ಮಾಡದೇ ಸಮಾಜ ಸೇವೆಗಾಗಿ ಬಳಸಿಕೊಳ್ಳಬೇಕು. ನಮ್ಮಲ್ಲಿ ಬೇರೆ ಸಂಘವಿಲ್ಲ, ಬಿನ್ನಾಭಿಪ್ರಾಯ ಇಲ್ಲ, ಭಿನ್ನ ಮತವಿಲ್ಲ. ನಾವು ಏನೇ ಕೆಲಸ ಮಾಡಿದರು ಅದು ಜನಾಂಗದ ಒಳಿತಿಗಾಗಿರಬೇಕು ಎಂದರು.

# ಬೀಳುವ ಸ್ಥಿತಿಯಲ್ಲಿ ವಿದ್ಯುತ್ ಕಂಬ: ಆತಂಕ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ತಾಲ್ಲೂಕಿನ ದಬ್ಬೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇಲನಹಳ್ಳಿ ಗ್ರಾಮದಲ್ಲಿ ವಿದ್ಯುತ್ ಕಂಬವೊಂದು ಬೀಳುವ ಸ್ಥಿತಿಗೆ ತಲುಪಿದ್ದು ತೆರವುಗೊಳಿಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಗ್ರಾಮದ ಬಸವಯ್ಯ ಎಂಬುವರ ಮನೆ ಮುಂದಿನ ವಿದ್ಯುತ್ ಕಂಬ ಶಿಥಿಲಾವಸ್ಥೆ ತಲುಪಿದೆ. ತಂತಿಗಳು ಕೈಗೆ ತಾಕುವಂತೆ ನೆಲಕ್ಕೆ ಬಾಗಿವೆ. ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಯಾವಾಗ ಬೇಕಾದರೂ ಅವಘಡ ಸಂಭವಿಸಬಹುದು.

ಈ ಬಗ್ಗೆ ಸೆಸ್ಕಾಂ ಹಾಗು ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಅನಾಹುತ ಸಂಭವಿಸುವ ಮೊದಲು ವಿದ್ಯುತ್ ಕಂಬ ತೆರವುಗೊಳಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

# ಜಾಗದ ವಿಚಾರವಾಗಿ ಗಲಾಟೆ: ಹಲ್ಲೆ

ಅರಸೀಕೆರೆ: ತಾಲ್ಲೂಕಿನ ಗುತ್ತಿನಕೆರೆ ಗ್ರಾಮದಲ್ಲಿ ಮನೆ ಮುಂದಿನ ಜಾಗದ ವಿಚಾರವಾಗಿ ಸ್ನೇಹಿತರೊಂದಿಗೆ ಒಟ್ಟುಗೂಡಿ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಗಿದೆ.

ಗ್ರಾಮದ ಲಕ್ಷ್ಮಣಪ್ಪ ಗಾಯಾಳು. ನಂದನ್ ಹಾಗೂ ಆತನ ಐವರು ಸ್ನೇಹಿತರು ಮದ್ಯದ ಅಮಲಿನಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ಲಕ್ಷ್ಮಣಪ್ಪ ಹಾಗೂ ನಂದನ್ ನಡುವೆ ಮನೆ ಪಕ್ಕದ ಜಾಗದ ವಿಚಾರವಾಗಿ ಆಗಾಗ ಜಗಳ ನಡೆಯುತ್ತಿತ್ತು. ಜೂ. 22ರ ರಾತ್ರಿ ನಂದನ್ ತನ್ನ ಸ್ನೇಹಿತರಾದ

ಅಭಿ, ಬಸವ, ತೇಜು, ಹರಿ ಹಾಗೂ ಪ್ರಜ್ವಲ್ ಎಂಬುವರು ಮದ್ಯ ಸೇವಿಸಿ ಗಲಾಟೆ ಮಾಡುತ್ತಿದ್ದಾಗ ಅದನ್ನು ಪ್ರಶ್ನಿಸಿದ್ದಕ್ಕೆ ಏಕಾಏಕಿ ಕೊರಳಪಟ್ಟಿ ಹಿಡಿದ ಮನಬಂದಂತೆ ಥಳಿಸಿ ಕಲ್ಲಿನಿಂದ ತಲೆಗೆ ಹೊಡೆದಿದ್ದಾರೆ. ಗಾಯಾಳು ಲಕ್ಷ್ಮಣಪ್ಪ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜೂನ್-25

**1975:** ಭಾರತದಲ್ಲಿ ತುರ್ತು ಸ್ಥಿತಿ ಘೋಷಣೆ: ಪ್ರಧಾನಿ ಇಂದಿರಾ ಗಾಂಧಿಯವರ ನೇತೃತ್ವದಲ್ಲಿ ರಾಷ್ಟ್ರಪತಿ ಫಖ್ರುದಿನ್ ಅಲಿ ಅಹಮದ್ ಅವರು 1975ರ ಜೂ. 25ರಂದು ತುರ್ತು ಸ್ಥಿತಿಯನ್ನು ಘೋಷಿಸಿದರು. ಇದು 21 ತಿಂಗಳು ಮುಂದುವರಿದಿತ್ತು. ಈ ಅವಧಿಯಲ್ಲಿ ನಾಗರಿಕ ಹಕ್ಕುಗಳನ್ನು ನಿರ್ಬಂಧಿಸಲಾಯಿತು ಮತ್ತು ಹಲವಾರು ರಾಜಕೀಯ ಮುಖಂಡರನ್ನು ಬಂಧಿಸಲಾಯಿತು.

**1983:** ಕಪಿಲ್ ದೇವ್ ನೇತೃತ್ವದ ಭಾರತ ತಂಡವು ಕ್ರಿಕೆಟ್ ವಿಶ್ವಕಪ್ ಗೆದ್ದಿತು: ಭಾರತವು ಮೊದಲ ಬಾರಿಗೆ ಕ್ರಿಕೆಟ್ ವಿಶ್ವಕಪ್ ಗೆದ್ದ ದಿನವೂ ಇದೇ. ವೆಸ್ಟ್ ಇಂಡೀಸ್ ತಂಡವನ್ನು ಲಾರ್ಡ್ಸ್‌ನಲ್ಲಿ ಸೋಲಿಸಿ ಭಾರತ ವಿಶ್ವಕಪ್ ಜಯಿಸಿದೆ.

**1950:** ಉತ್ತರ ಕೊರಿಯಾ ದಾಳಿ: ಉತ್ತರ ಕೊರಿಯಾ ದಕ್ಷಿಣ ಕೊರಿಯಾಪೈ ದಾಳಿ ನಡೆಸಿದ ದಿನ. ಈ ದಾಳಿ ಕೊರಿಯಾ ಯುದ್ಧಕ್ಕೆ ಕಾರಣವಾಯಿತು.

**1991:** ಕ್ರೊವೇಶಿಯಾ ಮತ್ತು ಸ್ಲೋವೆನಿಯಾ ಯುರೋಪಿಯನ್ ಯುನಿಯನ್‌ನಿಂದ ಸ್ವಾತಂತ್ರ್ಯ ಘೋಷಿಸಿದ ದಿನ.

**ಜನನ**

**1903:** ಜಾರ್ಜ್ ಓರ್ವೆಲ್, ಪ್ರಸಿದ್ಧ ಇಂಗ್ಲಿಷ್ ಲೇಖಕ ಮತ್ತು ಸಾಮಾಜಿಕ ಚಿಂತಕ.

**1954:** ಶ್ರೀಮತಿ ಕೃಪಾಲನಿ ಪಾಟೀಲ್, ಸ್ವಾತಂತ್ರ್ಯ ಹೋರಾಟಗಾರ್ತಿ ಮತ್ತು ಸಮಾಜ ಸೇವಕಿ.

# ಪುಷ್ಪಲತ ಸೋಮಶೇಖರ್‌ಗೆ ಅಕ್ಷಯಕಲ್ಪ ರೈತ ಉದ್ಯಮಿ ಪ್ರಶಸ್ತಿ ಗರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಭಾರತೀಯ ಕೃಷಿಯನ್ನು ಪುನರುಜ್ಜೀವನಗೊಳಿಸಿ, ಹಲವಾರು ಕಾರಣಗಳಿಂದ ಕೃಷಿಯನ್ನು ತೊರೆದಿರುವ ಯುವ ರೈತರನ್ನು ಮರಳಿ ಕೃಷಿಗೆ ತರುವ ಉದ್ದೇಶವನ್ನು ಹೊಂದಿರುವ 'ಅಕ್ಷಯಕಲ್ಪ' ಬಳಗ, ಅದೆಷ್ಟೋ ರೈತ ಕುಟುಂಬಗಳಿಗೆ ಆಶಾಕಿರಣವಾಗಿದೆ. ಈ ಸಂಸ್ಥೆಯ ಸಂಪರ್ಕಕ್ಕೆ ಬಂದ ರೈತರ ಬಾಳು ಬೆಳಕಾಗಿದೆ, ಬದುಕು ಹಸನಾಗಿದೆ. ಉದಯೋನ್ಮುಖವಾಗಿ ಬೆಳೆಯುತ್ತಿರುವ ರೈತರಿಗೆ ಪ್ರೋತ್ಸಾಹ ನೀಡಿ ಬೆನ್ನೆಲುಬಾಗಿ ನಿಲ್ಲುವುದೇ ಅಕ್ಷಯ ಕಲ್ಪ ಸಂಸ್ಥೆಯ ಕಾರ್ಯ. ಹೈನುಕಾರಿಕೆಯಲ್ಲಿ ತೊಡಗಿಕೊಂಡು ಸಾವಯವ ಕೃಷಿಗೂ ಒತ್ತುಕೊಟ್ಟು ಮಹಿಳೆ ಅಬಲೆಯಲ್ಲ ಸಬಲೆ ಎಂದು ತೋರಿಸಿಕೊಟ್ಟ ರೈತ ಮಹಿಳೆ ಪುಷ್ಪಲತ ಸೋಮಶೇಖರ್ ಅವರನ್ನು ಗುರುತಿಸಿ ಇವರಿಗೆ ಅಕ್ಷಯಕಲ್ಪ ರೈತ ಉದ್ಯಮಿ ಪ್ರಶಸ್ತಿ ನೀಡಿ ಗೌರವಿಸಿದೆ.

ಪುಷ್ಪಲತ ಸೋಮಶೇಖರ್ ಅವರು ಪ್ರಾರಂಭದಲ್ಲಿ ಕುಟುಂಬದೊಂದಿಗೆ ಹಿರಿಯಸಾವೆಯಲ್ಲಿ ನೆಲೆಸಿದ್ದ ಇವರು, ಪ್ರತಿದಿನ ತಮ್ಮ ಹುಟ್ಟೂರಾದ ಆಚಾರಿಪುರಕ್ಕೆ ಹೋಗಿ ಅಣಬೆ ಕೃಷಿ, ಕೋಳಿ ಹಾಗೂ ಮೊಲ ಸಾಕಾಣಿಕೆಯಲ್ಲಿ ತೊಡಗಿದ್ದರು. ಬಳಿಕ, 2020ರಲ್ಲಿ ಮನೆಯಲ್ಲಿ ಸಂಭವಿಸಿದ ದುರ್ಘಟನೆಯ ಆಘಾತದಿಂದ ಕುಗ್ಗದೆ, ತಮ್ಮ ಮಗನನ್ನು ಜೊತೆಗೆ ಕರೆದುಕೊಂಡು ಆಚಾರಿಪುರಕ್ಕೆ ಆಗಮಿಸುತ್ತಾರೆ. ವಾಸದ ವ್ಯವಸ್ಥೆಗೆ ಮನೆಯಲ್ಲಿ ನಡೆಸುತ್ತಿದ್ದ ಅಣಬೆ ಕೃಷಿಯನ್ನು ನಿಲ್ಲಿಸಲು ತೀರ್ಮಾನಿಸಿ, ಸಾಕುತ್ತಿದ್ದ ಕೋಳಿಗಳು ಮತ್ತು ಮೊಲಗಳನ್ನೂ ಮಾರಾಟ ಮಾಡುತ್ತಾರೆ. ಈ ಮಧ್ಯೆ ಜೀವನದ ದಿನಗಳು ದುಸ್ತರವಾಗುತ್ತವೆ.

ಗಂಡನ ಜೀವವಿಮೆಯ ಹಣದಲ್ಲಿ ಒಂದು ಹಸುವನ್ನು ಕೊಂಡು ಹೊಸ ಬದುಕನ್ನು ಪ್ರಾರಂಭಿಸುತ್ತಾರೆ. ಆರಂಭದಲ್ಲಿ ಜೀವನೋಪಾಯಕ್ಕೆ ಮಾರ್ಗವಾಗಿದ್ದ ಹೈನುಗಾರಿಕೆ ನಂತರದ ದಿನಗಳಲ್ಲಿ ಅಷ್ಟು ಲಾಭವೆನಿಸುವುದಿಲ್ಲ. 2023 ರಲ್ಲಿ 'ಅಕ್ಷಯಕಲ್ಪ' ಸಂಪರ್ಕಕ್ಕೆ ಬಂದ ಇವರು ಹೈನೋದ್ಯಮದಲ್ಲಿ ಹಲವು ಮಾರ್ಪಾಡುಗಳನ್ನು ಮಾಡಿಕೊಂಡು ದಿನ ನಿತ್ಯದ ಕೆಲಸಗಳನ್ನು ಸುಲಭಗೊಳಿಸಿಕೊಂಡು ದಿನಮೊಂದಕ್ಕೆ 9 ಹಸುಗಳಿಂದ ಸರಾಸರಿ 90ಲೀ. ಹಾಲು ಉತ್ಪಾದನೆ ಮಾಡುತ್ತಿರುತ್ತಾರೆ.

ಮನೆಯ ಸುತ್ತಲ ಜಾಗದಲ್ಲಿ ಹಲವು ಬಗೆಯ ಹಣ್ಣಿನ, ಹೂವು ಗಿಡಗಳು ಮತ್ತು ತರಕಾರಿಗಳನ್ನು ಬೆಳೆದಿರುವ ಇವರು 5-6 ಸೇಬಿನ ಗಿಡಗಳನ್ನೂ ನೆಟ್ಟಿರುತ್ತಾರೆ. ವರ್ಷಕ್ಕೆ ಸರಾಸರಿ ಗಿಡಮೊಂದರಿಂದ 20-25 ಸೇಬನ್ನು ಕುಯಿಲು ಮಾಡುತ್ತಾರೆ. ಇವರ ಕೈತೋಟದಿಂದ ತಿಂಗಳ ಸರಾಸರಿ ಆದಾಯ 5 ಸಾವಿರ, ಎಲ್ಲ ಕೃಷಿ ಉತ್ಪನ್ನಗಳನ್ನು ಮೌಲ್ಯವರ್ಧನೆ ಮಾಡುವುದು ಇವರ ಮತ್ತೊಂದು ವಿಶೇಷ. ಇವರು ಇರುವ 3.5 ಎಕರೆ ಜಾಗದಲ್ಲಿ ಹಸುಗಳಿಗೆ ಮೇವಿನ ಜೊತೆಗೆ ಮನೆಗೆ ಬೇಕಾಗುವ ಎಲ್ಲ ಆಹಾರ ಬೆಳೆಗಳನ್ನೂ ಬೆಳೆದುಕೊಂಡು ಸಂಪೂರ್ಣ ಸ್ವಾವಲಂಬನೆ ಸಾಧಿಸಿರುತ್ತಾರೆ. ಮುಂದಿನ ದಿನಗಳಲ್ಲಿ ಒಂದು ಸುಂದರ ತೋಟ ಕಟ್ಟುವ ಕನಸಿರುವ ಇವರು ಮಗ ರೇವನ್‌ಗೆ ಉತ್ತಮ ವಿಧ್ಯಾಭ್ಯಾಸ ಕೊಡಿಸಿ ಕಾನೂನು ಪದವೀಧರನನ್ನಾಗಿ ಮಾಡಿದ್ದಾರೆ.

ಇವರ ಸಾಧನೆಯನ್ನು ಗುರುತಿಸಿ, ಇವರ ಸ್ವಾವಲಂಬಿ ಕೃಷಿಯನ್ನು ಮುಂದುವರಿಸಿಕೊಂಡು ಇಂದಿನ ಯುವ ಜನಾಂಗಕ್ಕೆ ಆದರ್ಶರಾಗಬೇಕೆಂಬ ಉದ್ದೇಶದಿಂದ ಈ ಕೃಷಿ ಸಾಧಕಿಗೆ 'ಅಕ್ಷಯಕಲ್ಪ ಬಳಗ'ದ ಸಭೆಯಲ್ಲಿ ಅಕ್ಷಯಕಲ್ಪ ರೈತ ಉದ್ಯಮಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ.






## ಅಕ್ಷಯಕಲ್ಪ ಧ್ಯೇಯೋದ್ದೇಶಗಳು

ಭಾರತೀಯ ಕೃಷಿಯನ್ನು ಪುನರುಜ್ಜೀವನಗೊಳಿಸಲು, ಹಲವಾರು ಕಾರಣಗಳಿಂದ ಕೃಷಿಯನ್ನು ತೊರೆದಿರುವ ಯುವ ರೈತರನ್ನು ಮರಳಿ ಕೃಷಿಗೆ ತರುವುದು, ಹಣಕಾಸು ಸಂಸ್ಥೆಗಳೊಂದಿಗೆ ಸಂಪರ್ಕಸಾಧಿಸಿ ವಿಸ್ತರಣಾ ಸೇವೆ, ತಾಂತ್ರಿಕ ಸೇವೆ, ಮತ್ತು ಮಾರುಕಟ್ಟೆ ಸೇವೆ ಒದಗಿಸಿ ರೈತರನ್ನು ಉದ್ಯಮಿಗಳನ್ನಾಗಿ ಮಾಡುವುದು, ಮಾನವ ಮತ್ತು ಪ್ರಕೃತಿಯ ಭಾವನಾತ್ಮಕ ಸಂಬಂಧದ ನಂಬಿಕೆಯೊಂದಿಗೆ ನೆಲ ಜಲ ಸಂರಕ್ಷಣೆ ಮಾಡಿಕೊಂಡು, ಜೀವವೈವಿಧ್ಯತೆ ಕಾಪಾಡಿಕೊಂಡು ಸಾವಯವ ಉತ್ಪನ್ನಗಳ ಉತ್ಪಾದನೆ ಮಾಡಲು ಉತ್ತೇಜಿಸುವುದು, ಪರಿಪೂರ್ಣ ಕೃಷಿ ಪರಿಸರ ವ್ಯವಸ್ಥೆಯನ್ನು ಉತ್ತಮಗೊಳಿಸಲು ತಾಂತ್ರಿಕತೆಯನ್ನು ಒದಗಿಸುವುದು.

## ರೈತರ ಮಕ್ಕಳು ಮರಳಿ ಬರುತ್ತಿದ್ದಾರೆ

ಹಿರಿಸಾವೆ : ತೋಟಕ್ಕೆ ಅತಿಯಾದ ನೀರಿನ ಅವಶ್ಯಕತೆಯಿಲ್ಲ ಕೇವಲ ತೇವಾಂಶವಿದ್ದರೆಸಾಕು, ಮಣ್ಣಿನ ಗುಣಮಟ್ಟ ಕಾಪಾಡಿಕೊಳ್ಳಲು ತೋಟಗಳಲ್ಲಿ ಬಸಿಗಾಲುವೆ, ಉದಿ ಮತ್ತು ಮುಚ್ಚಿಕೆ ಬಹಳ ಮುಖ್ಯ ಎಂದು ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತ, ರಾಜ್ಯದ ಪ್ರಗತಿಪರ ಕೃಷಿಕ ಸಂತೇಶಿವರ ಬಸವರಾಜು ತಿಳಿಸಿದರು.

ನಾಗಮಂಗಲ ತಾಲ್ಲೂಕು ಬಿಂಡಿಗನವಿಲೆ ಹೋಬಳಿಯ ಆಚಾರಿಪುರದ ಪುಷ್ಪಲತ ಸೋಮಶೇಖರ್ ಅವರ ತೋಟದಲ್ಲಿ ನೆಡೆದ ಅಕ್ಷಯಕಲ್ಪ ಬಳಗದ ಜೂನ್ ತಿಂಗಳ ಸಭೆಯಲ್ಲಿ ರೈತರನ್ನುದ್ದೇಶಿಸಿ ಮಾತನಾಡಿದ ಅವರು, ಸಾವಯವ ಕೃಷಿಯ ಹಲವು ಮಜಲುಗಳನ್ನು ತಿಳಿಸುತ್ತಾ ಮಣ್ಣು ಮತ್ತು ನೀರಿನ ಮಹತ್ವಗಳ ಬಗ್ಗೆ ತಿಳಿಹೇಳಿ, ತೆಂಗಿನ ಕೆಂಪುಮೂತಿ ಹುಳ, ರಸ ಸೋರುವ ರೋಗ ಮತ್ತು ಕುರುವಾಯಿ (ರೈನೊಸಾರಸ್ ದುಂಬಿ)ಗಳ ನಿಯಂತ್ರಣದಬಗ್ಗೆ ತಮ್ಮ ಅನುಭವದ ಪರಿಹಾರಗಳನ್ನು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ನಗರಗಳಿಂದ ನಮ್ಮ ರೈತರ ಮಕ್ಕಳು ಹಳ್ಳಿಗಳಿಗೆ ಹಿಂದಿರುಗಿ ಯಶಸ್ವಿಯಾಗಿ ಸಾವಯವಕೃಷಿ ಮಾಡುತ್ತಾ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೆ. ಈ ನಿಟ್ಟಿನಲ್ಲಿ ತಿಪಟೂರಿನ ಅಕ್ಷಯಕಲ್ಪ ಸಂಸ್ಥೆ ಮಹತ್ತರವಾದ ಕೆಲಸವನ್ನು ಮಾಡುತ್ತಿದೆ. ಪ್ರತ್ಯಕ್ಷವಾಗಿ ಸಾವಿರಾರು ಗ್ರಾಮೀಣ ಪ್ರದೇಶದ ಯುವಕರಿಗೆ ಮತ್ತು ಪರೋಕ್ಷವಾಗಿ ಸಾವಿರಾರು ಜನಗಳಿಗೆ ಉದ್ಯೋಗಗಳನ್ನು ಸೃಷ್ಠಿ ಮಾಡುವುದರ ಜೊತೆಗೆ ನಗರದಿಂದ ಹಿಂದಿರುಗಿದ ಯುವಕರಿಗೆ ಉತ್ತಮ ಮಾರ್ಗದರ್ಶನ ನೀಡಿ ಅವರುಗಳನ್ನು ಕೃಷಿ ಉದ್ಯಮಿಗಳನ್ನಾಗಿ ಮಾಡುತ್ತಿದೆ ಎಂದು ಪ್ರಶಂಸೆಯ ನುಡಿಗಳನ್ನಾಡಿದರು.

ಮತ್ತೊಬ್ಬ ಸಂಪನ್ಮೂಲ ವ್ಯಕ್ತಿ ತಿಪಟೂರು ತಾಲ್ಲೂಕು ಮಾಚುಘಟ್ಟದ ಪುಟ್ಟರಾಜು ಅವರು ಉತ್ಕೃಷ್ಟ ಗೊಬ್ಬರಗಳ ತಯಾರಿಕೆ ಬಗ್ಗೆ ತಿಳಿಸಿದರು.

ಅಕ್ಷಯಕಲ್ಪ ಸಂಸ್ಥೆಯ ರೈತ ತರಬೇತುದಾರ ಮಹಲಿಂಗಪ್ಪ, ಸಂಸ್ಥೆ ಮತ್ತು ಬಳಗದ ಸಭೆಯ ಧ್ಯೇಯೋದ್ದೇಶಗಳನ್ನು ತಿಳಿಸಿದರು.

ಸಭೆಯ ಆತಿಥ್ಯ ನೀಡಿದ ಪುಷ್ಪಲತ ಸೋಮಶೇಖರ್ ಮಾತನಾಡಿ, ತಾವು ಬದುಕಿನಲ್ಲಿ ಪಟ್ಟ ಕಷ್ಟಗಳು, ಅಕ್ಷಯಕಲ್ಪದಿಂದ ಹೈನೋದ್ಯಮದಲ್ಲಿ ತಾವು ಮಾಡಿಕೊಂಡ ಹಲವು ಮಾರ್ಪಾಡುಗಳು ಮತ್ತು ಅವುಗಳಿಂದ ತಮಗೆ ಆದ ಅನುಕೂಲತೆಗಳನ್ನು ತಿಳಿಸಿದರು.

ಇದೇ ಸಂದರ್ಭದಲ್ಲಿ ಪುಷ್ಪಲತ ಸೋಮಶೇಖರ್ ಅವರಿಗೆ ಅಕ್ಷಯಕಲ್ಪ ರೈತ ಉದ್ಯಮಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಕಾರ್ಯಕ್ರಮಕ್ಕೆ ಜಿಲ್ಲೆಯ ಹಲವು ಪ್ರಗತಿಪರ ರೈತರಲ್ಲದೆ ದೂರದ ಊರುಗಳಿಂದಲೂ ಹಲವು ರೈತರುಗಳು ಭಾಗವಹಿಸಿದ್ದರು. ಅಕ್ಷಯಕಲ್ಪ ಸಂಸ್ಥೆಯ ರಘುರಾಂ, ವಲಯಾಧಿಕಾರಿ ಲೋಕೇಶ್, ಅಶ್ವತ್ ಉಪಸ್ಥಿತರಿದ್ದರು.



Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248